| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16

Total No. of Questions : 56 ] [ Total No. of Printed Pages : 16

**ಸಂಕೇತ ಸಂಖ್ಯೆ : 93-K** **ವಿಷಯ : ಭಾರತೀಯ ರಾಜ್ಯಶಾಸ್ತ್ರ ಮತ್ತು ಪೌರನೀತಿ**

# Code No. : 93-K Subject : INDIAN POLITICS & CIVICS

( ಕನ್ನಡ ಭಾಷಾಂತರ / Kannada Version )

ದಿನಾಂಕ : 03. 04. 2014 ] [ Date : 03. 04. 2014

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | × | |
| 10. | | 22. | | 34. | | 46. | | × | |
| 11. | | 23. | | 35. | | 47. | | × | |
| 12. | | 24. | | 36. | | 48. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

[ Turn over

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಈ ಕೆಳಗಿನವುಗಳಲ್ಲಿ ಯಾವುದು ಒಂದು ಸರ್ಕಾರದ ಅಂಗವಾಗಿಲ್ಲ ?

(A) ಶಾಸಕಾಂಗ (B) ಕಾರ್ಯಾಂಗ

(C) ನ್ಯಾಯಾಂಗ (D) ಕೇಂದ್ರ ಲೋಕ ಸೇವಾ ಆಯೋಗ

*ಉತ್ತರ :* ____________________

2. ಭಾರತದ ರಾಷ್ಟ್ರಪತಿಯವರು ರಾಜ್ಯಪಾಲರನ್ನು ಇವರ ಸಲಹೆಯ ಮೇರೆಗೆ ನೇಮಿಸುತ್ತಾರೆ

(A) ಮುಖ್ಯಮಂತ್ರಿ (B) ಪ್ರಧಾನ ಮಂತ್ರಿ

(C) ಕೇಂದ್ರ ಸಚಿವ ಸಂಪುಟ (D) ರಾಜ್ಯ ಸಚಿವ ಸಂಪುಟ

*ಉತ್ತರ :* ____________________

3. ಒಂದು ವೇಳೆ ರಾಜ್ಯ ಶಾಸಕಾಂಗದ ಸದಸ್ಯರಲ್ಲದ ವ್ಯಕ್ತಿಯು ಮುಖ್ಯಮಂತ್ರಿಯಾಗಿ ನೇಮಿಸಲ್ಪಟ್ಟರೆ ಅವರು

(A) ಆರು ತಿಂಗಳೊಳಗಾಗಿ ಶಾಸಕಾಂಗದ ಸದಸ್ಯತ್ವ ಪಡೆಯಬೇಕು

(B) ಎರಡು ತಿಂಗಳೊಳಗಾಗಿ ಶಾಸಕಾಂಗದ ಸದಸ್ಯತ್ವ ಪಡೆಯಬೇಕು

(C) ರಾಜ್ಯಪಾಲರ ವಿಶ್ವಾಸಗಳಿಸಬೇಕು

(D) ರಾಷ್ಟ್ರಪತಿಯವರ ವಿಶ್ವಾಸಗಳಿಸಬೇಕು

*ಉತ್ತರ :* ____________________

4. ಭಾರತದ ಪೌರನಿಗೆ ಮತ ಚಲಾಯಿಸಲು ಇರಬೇಕಾದ ಕನಿಷ್ಠ ವಯೋಮಿತಿ

(A) 28 ವರ್ಷಗಳು (B) 16 ವರ್ಷಗಳು

(C) 18 ವರ್ಷಗಳು (D) 21 ವರ್ಷಗಳು

*ಉತ್ತರ :* ______________________________

5. ಜಿಲ್ಲಾ ನ್ಯಾಯಾಧೀಶರುಗಳನ್ನು ನೇಮಕ ಮಾಡುವವರು

(A) ಮುಖ್ಯಮಂತ್ರಿ (B) ರಾಜ್ಯಪಾಲರು

(C) ಗೃಹ ಮಂತ್ರಿ (D) ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು

*ಉತ್ತರ :* ______________________________

6. ಲೋಕ ಸೇವಾ ಆಯೋಗದ ಸದಸ್ಯರು ಮತ್ತು ಅಧ್ಯಕ್ಷರನ್ನು ವಜಾಗೊಳಿಸುವವರು

(A) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು

(B) ರಾಷ್ಟ್ರಪತಿ

(C) ಪ್ರಧಾನ ಮಂತ್ರಿ

(D) ಉಪ-ರಾಷ್ಟ್ರಪತಿ

*ಉತ್ತರ :* ______________________________

7. ರಾಜ್ಯದ ಮುಖ್ಯ ಹುದ್ದೆಗಳಿಗೆ ನೇಮಕ ಮಾಡುವಾಗ ರಾಜ್ಯಪಾಲರಿಗೆ ಸಲಹೆ ನೀಡುವವರು

(A) ಗೃಹ ಮಂತ್ರಿ (B) ಮುಖ್ಯಮಂತ್ರಿ

(C) ರಾಷ್ಟ್ರಪತಿ (D) ಉಪ-ರಾಷ್ಟ್ರಪತಿ

*ಉತ್ತರ :* ______________________________

8. ಈ ಕೆಳಗಿನ ಯಾವ ರಾಜ್ಯದಲ್ಲಿ ವಿಧಾನ ಪರಿಷತ್ ಕಂಡುಬರುತ್ತದೆ ?

(A) ಕರ್ನಾಟಕ (B) ಕೇರಳ

(C) ಒಡಿಶಾ (D) ಗೋವಾ

*ಉತ್ತರ :* ______________________________

9. ಕರ್ನಾಟಕದ ಉಚ್ಚ ನ್ಯಾಯಾಲಯದ ಕೇಂದ್ರ ಕಛೇರಿ ಇರುವ ಸ್ಥಳ

(A) ಮೈಸೂರು (B) ಬೆಂಗಳೂರು

(C) ಮಂಗಳೂರು (D) ಧಾರವಾಡ

*ಉತ್ತರ :* ______________________________

10. ಉಚ್ಚ ನ್ಯಾಯಾಲಯವು ಅಧೀನ ನ್ಯಾಯಾಲಯಗಳ ವಿರುದ್ಧ ನೀಡುವ ಲೇಖ

(A) ನಿಷೇಧ ಲೇಖ (B) ಕಟ್ಟಪ್ಪಣೆ ಲೇಖ

(C) ಬಂದಿ ಪ್ರತ್ಯಕ್ಷೀಕರಣ ಲೇಖ (D) ಉತ್ಪ್ರೇಕ್ಷಣೆ ಲೇಖ

ಉತ್ತರ : ______________________

11. ಲೋಕ ಸೇವಾ ಆಯೋಗದಿಂದ ನೇಮಕಗೊಂಡ ಸರ್ಕಾರಿ ಅಧಿಕಾರಗಳ ವಜಾ ಮಾಡುವ ಅಧಿಕಾರವಿರುವುದು

(A) ಮುಖ್ಯಮಂತ್ರಿ (B) ಪ್ರಧಾನ ಮಂತ್ರಿ

(C) ರಾಷ್ಟ್ರಪತಿ (D) ರಾಜ್ಯಪಾಲರು

ಉತ್ತರ : ______________________

12. ಕರ್ನಾಟಕ ರಾಜ್ಯದ ಗ್ರಾಮ ಪಂಚಾಯಿತಿಯ ರಚನೆಗೆ ಬೇಕಾಗುವ ಜನಸಂಖ್ಯೆ

(A) 5000 ದಿಂದ 7000 (B) 2000 ದಿಂದ 7000

(C) 1000 ದಿಂದ 2000 (D) 1000 ದಿಂದ 3000

ಉತ್ತರ : ______________________

13. ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು

(A) ಪುರಸಭೆ ವ್ಯಾಪ್ತಿಯ ಪ್ರದೇಶಗಳು (B) ಪಟ್ಟಣ ಪುರಸಭೆ ವ್ಯಾಪ್ತಿಯ ಪ್ರದೇಶಗಳು

(C) ಮಹಾನಗರ ಪಾಲಿಕೆಯ ಪ್ರದೇಶಗಳು (D) ತಾಲ್ಲೂಕು ಪಂಚಾಯಿತಿಯ ಪ್ರದೇಶಗಳು

ಉತ್ತರ : ______________________

14. ಭಾರತದ ವಿದೇಶಾಂಗ ನೀತಿಯ ಶಿಲ್ಪಿ

(A) ಜವಹರಲಾಲ್ ನೇಹರು (B) ಮಹಾತ್ಮ ಗಾಂಧಿಜೀ

(C) ಸುಭಾಷ್ ಚಂದ್ರ ಬೋಸ್ (D) ಬಾಬು ರಾಜೇಂದ್ರ ಪ್ರಸಾದ್

ಉತ್ತರ : ______________________

15. ವಿಶ್ವಸಂಸ್ಥೆಯು ಸ್ಥಾಪನೆಯಾದದ್ದು ..................... ರಂದು.

(A) 24. 10. 1946 (B) 24. 10. 1945

(C) 24. 08. 1945 (D) 24. 08. 1946

ಉತ್ತರ : ______________________

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

16. ಪಂಚಾಯತ್ ರಾಜ್ ವ್ಯವಸ್ಥೆಯ ಬೆನ್ನೆಲುಬು ..................................................

17. ತಾಲ್ಲೂಕು ಪಂಚಾಯಿತಿ ಅಧಿಕಾರಾವಧಿ .................................................. ವರ್ಷ.

18. ಮೇಯರ್‌ನ ಅಧಿಕಾರಾವಧಿ .................................................. ವರ್ಷ.

19. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿ ವಯಸ್ಸು ವರ್ಷಗಳು .................................... ವರ್ಷ.

20. ಶಾಸಕಾಂಗವು ಎರಡು ಸದನಗಳನ್ನು ಹೊಂದಿದ್ದರೆ ಅದನ್ನು ..................................................
ಶಾಸಕಾಂಗ ಎಂದು ಕರೆಯುವರು.

III. 21. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಅಂಶಗಳನ್ನು **B** ಪಟ್ಟಿಯಲ್ಲಿನ ಅಂಶಗಳೊಡನೆ ಹೊಂದಿಸಿ ಕೆಳಗೆ ಕೊಟ್ಟಿರುವ ಜಾಗದಲ್ಲಿ ಬರೆಯಿರಿ : 5 × 1 = 5

| ***A ಪಟ್ಟಿ*** | ***B ಪಟ್ಟಿ*** |
|---|---|
| a) ಉಚ್ಚ ನ್ಯಾಯಾಲಯ | i) ರಾಷ್ಟ್ರ ಮಟ್ಟದ ನ್ಯಾಯಾಲಯ |
| b) ಸರ್ವೋಚ್ಚ ನ್ಯಾಯಾಲಯ | ii) ಜಿಲ್ಲಾ ಮಟ್ಟದ ನ್ಯಾಯಾಲಯ |
| c) ಸೆಶೆನ್ಸ್ ನ್ಯಾಯಾಲಯ | iii) ರಾಜ್ಯ ಮಟ್ಟದ ನ್ಯಾಯಾಲಯ |
| d) ಉಚ್ಚ ನ್ಯಾಯಾಲಯದ ನ್ಯಾಯಾಧೀಶರು | iv) ರಾಜ್ಯಪಾಲರಿಂದ ನೇಮಕ |
| e) ಬಂದಿ ಪ್ರತ್ಯಕ್ಷೀಕರಣ | v) ರಾಷ್ಟ್ರಪತಿಯಿಂದ ನೇಮಕ |
| | vi) ತಾಲ್ಲೂಕು ಮಟ್ಟದ ನ್ಯಾಯಾಲಯ |
| | vii) ಬಂದಿತ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವುದು |
| | viii) ಸರ್ಕಾರಿ ಅಧಿಕಾರಿಗಳನ್ನು ಕೆಲಸ ಮಾಡುವಂತೆ ಮಾಡುವುದು |

*ಉತ್ತರಗಳು :* a) ________________

b) ________________

c) ________________

d) ________________

e) ________________

[ Turn over

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಒಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : $9 \times 1 = 9$

22. ವಿಶ್ವಸಂಸ್ಥೆಯನ್ನು ಏಕೆ ಸ್ಥಾಪಿಸಲಾಗಿದೆ ?

23. ಅಲಿಪ್ತ ನೀತಿ ಎಂದರೇನು ?

24. ವಿದೇಶಾಂಗ ನೀತಿ ಎಂದರೇನು ?

25. ಮಹಾನಗರ ಪಾಲಿಕೆಯ ಅಧ್ಯಕ್ಷರನ್ನು ಏನೆಂದು ಕರೆಯುತ್ತಾರೆ ?

26. ಸ್ಥಳೀಯ ಸ್ವಯಂ-ಸರ್ಕಾರಗಳಲ್ಲಿ ಎಷ್ಟು ವಿಧಗಳಿವೆ ?

27. ಮರು ವಿಚಾರಣಾ ಅಧಿಕಾರ ಎಂದರೇನು ?

28. ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದಾಗ ಅವುಗಳನ್ನು ಹೇಗೆ ಸಂರಕ್ಷಿಸಲಾಗುತ್ತದೆ ?

29. ಒಂದು ಸರ್ಕಾರದ ಆದ್ಯ ಕರ್ತವ್ಯವೇನು ?

30. ರಾಜ್ಯಪಾಲರ ಮತ್ತು ಮಂತ್ರಿ ಮಂಡಲದ ನಡುವಣ ಯಾರು ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತಾರೆ ?

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಎರಡು** ಅಥವಾ **ಮೂರು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 16 × 2 = 32

31. ನ್ಯಾಯಾಂಗದ ಪ್ರಾಮುಖ್ಯತೆಯನ್ನು ವಿವರಿಸಿ.

32. ರಾಜ್ಯಪಾಲರಾಗಿ ನೇಮಕವಾಗಲು ಇರಬೇಕಾದ ಅರ್ಹತೆಗಳೇನು ?

33. ರಾಜ್ಯಪಾಲರ ಹಣಕಾಸಿನ ಅಧಿಕಾರಗಳನ್ನು ತಿಳಿಸಿ.

34. ಮಂತ್ರಿಗಳಲ್ಲಿ ಎಷ್ಟು ವರ್ಗಗಳಿವೆ ? ಅವುಗಳನ್ನು ಹೆಸರಿಸಿ.

35. ವಿಧಾನ ಪರಿಷತ್ತಿನ ಸದಸ್ಯರನ್ನು ಹೇಗೆ ಚುನಾಯಿಸಲಾಗುತ್ತದೆ ?

36. ಒಂದು ರಾಜ್ಯದ ಮೇಲ್ಮನೆಯಿಂದಾಗುವ ಅನಾನುಕೂಲಗಳೇನು ?

37. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಪ್ರಾಮುಖ್ಯತೆಯನ್ನು ವಿವರಿಸಿ.

38. ಕಟ್ಟಪ್ಪಣೆ ಲೇಖವನ್ನು ಉಚ್ಚ ನ್ಯಾಯಾಲಯವು ಏಕೆ ಕೊಡುತ್ತದೆ ?

39. ಜಿಲ್ಲಾ ನ್ಯಾಯಾಧೀಶರಾಗಿ ನೇಮಕವಾಗಬೇಕಾದರೆ ಇರಬೇಕಾದ ಅರ್ಹತೆಗಳೇನು ?

40. ನೇಮಕಾತಿಯ ವಿಚಾರದಲ್ಲಿ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳ ನಡುವಿನ ಸಂಬಂಧವೇನು ?

41. ರಾಜ್ಯ ಲೋಕ ಸೇವಾ ಆಯೋಗದ ಕಾರ್ಯಗಳಾವುವು ?

42. ಸ್ಥಳೀಯ ಸ್ವಯಂ-ಸರ್ಕಾರಗಳ ಬಗ್ಗೆ ಗಾಂಧಿಜೀಯವರ ಅಭಿಪ್ರಾಯವೇನು ?

43. ಗ್ರಾಮ ಪಂಚಾಯಿತಿಯ ಪ್ರಮುಖವಾದ ಆದಾಯ ಮೂಲಗಳನ್ನು ತಿಳಿಸಿ.

44. ತಾಲ್ಲೂಕು ಪಂಚಾಯಿತಿಯ ಮುಖ್ಯ ಆದಾಯದ ಮೂಲಗಳಾವುವು ?

45. ಪುರಸಭೆಯು ಹೇಗೆ ಕಾರ್ಯ ನಿರ್ವಹಿಸುತ್ತದೆ ?

46. ಪುರಸಭೆಯ ಕಾರ್ಯಗಳನ್ನು ಹೇಗೆ ವರ್ಗೀಕರಿಸಲಾಗಿದೆ ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಆರು** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ರಾಜ್ಯಪಾಲರು ಮತ್ತು ಮುಖ್ಯಮಂತ್ರಿಯ ನಡುವಣ ಸಂಬಂಧವನ್ನು ವಿವರಿಸಿ.

48. ರಾಜ್ಯ ಶಾಸಕಾಂಗದ ಶಾಸನೀಯ ಅಧಿಕಾರಗಳನ್ನು ವಿವರಿಸಿ.

49. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಸ್ವಾತಂತ್ರ್ಯವನ್ನು ಹೇಗೆ ರಕ್ಷಿಸಲಾಗಿದೆ ?

50. ರಾಜ್ಯ ಲೋಕ ಸೇವಾ ಆಯೋಗದ ಕಾರ್ಯಗಳಾವುವು ?

51. ತಾಲ್ಲೂಕು ಪಂಚಾಯಿತಿಯ ಕಾರ್ಯಗಳನ್ನು ತಿಳಿಸಿ.

52. ಮಹಾನಗರ ಪಾಲಿಕೆಯ ಐಚ್ಛಿಕ ಕಾರ್ಯಗಳಾವುವು ?

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ : 4 × 4 = 16

53. ಮುಖ್ಯಮಂತ್ರಿಯವರ ಪ್ರಮುಖ ಅಧಿಕಾರಗಳನ್ನು ತಿಳಿಸಿ.

54. ಗ್ರಾಮ ಪಂಚಾಯಿತಿಗಳ ಕಾರ್ಯಗಳೇನು ?

55. ಪುರಸಭೆಯ ಮುಖ್ಯವಾದ ಐಚ್ಛಿಕ ಕಾರ್ಯಗಳನ್ನು ಪಟ್ಟಿಮಾಡಿ.

56. ಭಾರತದ ವಿದೇಶಾಂಗ ನೀತಿಯ ಮೂಲ ತತ್ತ್ವಗಳು ಯಾವುವು ?